ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 6, January-February 2026, Pp. 115-120
Bi-Monthly, Peer-Reviewed, Open Access, Indexed Journal

I S S N: 2583-3510

SIRDF JOURNALS
editor@srujani.in
www.srujani.in

ಕಾರ್ನಾಡರ ನಾಟಕಗಳಲ್ಲಿ ಸಂಸ್ಕೃತಿ ಮತ್ತು ಮಾನವೀಯ ಮೌಲ್ಯಗಳು

ಡಾ. ರುಕ್ಮಿಣಿ ಹೆಚ್. ಎಸ್
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುವೆಂಪುನಗರ, ಮೈಸೂರು

Abstract:

ಈ ಲೇಖನವು ಗಿರೀಶ್ ಕಾರ್ನಾಡರ 'ಅಂಜುಮಲ್ಲಿಗೆ', 'ಹಿಟ್ಟಿನ ಹುಂಜ' ಮತ್ತು 'ಅಗ್ನಿ ಮತ್ತು ಮಳೆ' ನಾಟಕಗಳಲ್ಲಿ ಪ್ರತಿಬಿಂಬಿತವಾಗಿರುವ ಸಾಂಸ್ಕೃತಿಕ ನೆಲೆಗಳು ಹಾಗೂ ಮಾನವೀಯ ಮೌಲ್ಯಗಳನ್ನು ವಿಶ್ಲೇಷಿಸುತ್ತದೆ. ಪೌರಾಣಿಕ, ಧಾರ್ಮಿಕ ಮತ್ತು ಸಾಮಾಜಿಕ ಕಥಾವಸ್ತುಗಳನ್ನು ಆಧರಿಸಿ ಕಾರ್ನಾಡರು ಸಂಪ್ರದಾಯ, ಧರ್ಮ, ವರ್ಣ–ವರ್ಗ ಸಂಘರ್ಷ ಮತ್ತು ಲಿಂಗ ಅಸಮಾನತೆಗಳನ್ನು ಹೇಗೆ ಚಿತ್ರಿಸಿದ್ದಾರೆ ಎಂಬುದನ್ನು ಇಲ್ಲಿ ಚರ್ಚಿಸಲಾಗಿದೆ. ಈ ನಾಟಕಗಳ ಪ್ರಮುಖ ಪಾತ್ರಗಳ ಮೂಲಕ ಪ್ರೀತಿ, ಕರುಣೆ, ಅಹಿಂಸೆ, ಕ್ಷಮೆ, ತ್ಯಾಗ ಮತ್ತು ನೈತಿಕತೆಯಂತಹ ಮಾನವೀಯ ಮೌಲ್ಯಗಳನ್ನು ಗುರುತಿಸಲಾಗಿದೆ. ಮಹಾ ಸಂಪ್ರದಾಯ ಮತ್ತು ಕಿರುಸಂಸ್ಕೃತಿಗಳ ನಡುವಿನ ಸಂಘರ್ಷವನ್ನು ಚಿತ್ರಿಸುವ ಮೂಲಕ ಕಾರ್ನಾಡರು ಬಾಹ್ಯ ಆಚರಣೆಗಳಿಗಿಂತ ಮಾನವೀಯ ಸಂಬಂಧಗಳ ಶ್ರೇಷ್ಠತೆಯನ್ನು ಎತ್ತಿಹಿಡಿದಿದ್ದಾರೆ. ಒಟ್ಟಾರೆಯಾಗಿ, ಸಂಸ್ಕೃತಿಯ ನಿಜವಾದ ಮೌಲ್ಯವು ಮಾನವೀಯತೆ, ಅಂತರಂಗದ ಶುದ್ಧಿ ಮತ್ತು ಪರಸ್ಪರ ಗೌರವದಲ್ಲಿ ಅಡಕವಾಗಿದೆ ಎಂಬುದನ್ನು ಕಾರ್ನಾಡರ ನಾಟಕಗಳು ಪ್ರತಿಪಾದಿಸುತ್ತವೆ.

Keywords: *ಗಿರೀಶ್ ಕಾರ್ನಾಡ್, ಕನ್ನಡ ನಾಟಕ ಸಾಹಿತ್ಯ, ಸಾಂಸ್ಕೃತಿಕ ಸಂಘರ್ಷ, ಮಾನವೀಯ ಮೌಲ್ಯಗಳು, ಸಂಪ್ರದಾಯ ಮತ್ತು ಆಧುನಿಕತೆ.*

ಪೀಠಿಕೆ

ಕನ್ನಡ ನಾಟಕ ಪ್ರಕಾರವನ್ನು ಅಂತರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ದ ಕೀರ್ತಿ ಸಾಹಿತಿ, ನಟ, ಹಾಗೂ ನಿರ್ದೇಶಕರಾದ ಗಿರೀಶ್ ಕಾರ್ನಾಡರಿಗೆ ಸಲ್ಲುತ್ತದೆ. ತನ್ನ ವಿಭಿನ್ನ ಮತ್ತು ವೈಶಿಷ್ಟ್ಯಪೂರ್ಣ ಸಾಹಿತ್ಯ ಕೃಷಿಯಿಂದಾಗಿ ಕನ್ನಡ ಸಾಹಿತ್ಯ ರಚನೆಯಲ್ಲಿ ಹೊಸ ಬಗೆಯ ಛಾಪೊಂದನ್ನು ಮೂಡಿಸಿದ್ದಾರೆ. ಒಂದೇ ಒಂದು ಸಾಹಿತ್ಯ ಪ್ರಕಾರ(ನಾಟಕ)ವನ್ನು ಮಾತ್ರ ಸೃಜಿಸಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದವರು ಕಾರ್ನಾಡರು ಸಾಮಾಜಿಕ, ಪೌರಾಣಿಕ, ಐತಿಹಾಸಿಕ ಮತ್ತು ಜಾನಪದ ಕಥಾವಸ್ತುವನ್ನು ತಮ್ಮ ಸಾಹಿತ್ಯ ಕೃಷಿಯ ವಸ್ತುವನ್ನಾಗಿ ಬಳಸಿಕೊಂಡಿದ್ದಾರೆ. ಅವರ ಮುರಿದು ಕಟ್ಟುವ ಪ್ರಕ್ರಿಯೆ ಅವರ ನಾಟಕೀಯ ವೈಶಿಷ್ಟತೆಗಳಲ್ಲೊಂದು. ಕಾರ್ನಾಡರ 'ಹಿಟ್ಟಿನ ಹುಂಜ' ಜೈನ ಸಂಸ್ಕೃತಿಯನ್ನು, 'ಅಂಜುಮಲ್ಲಿಗೆ' ವಸಹಾತುಶಾಯಿ ಸಂಸ್ಕೃತಿಯನ್ನು, ಹಾಗೂ ಅವರ 'ಅಗ್ನಿ ಮತ್ತು ಮಳೆ' ಜನಾಂಗೀಯ ಘರ್ಷಣೆಯ ನೆಲೆಯನ್ನು ಪ್ರತಿಬಿಂಬಿಸುವಂತವು. ಪ್ರಸ್ತುತ ನಾನು ಈ ನಾಟಕಗಳಲ್ಲಿನ ಸಂಸ್ಕೃತಿ ಮತ್ತು ಮಾನವೀಯ ಮೌಲ್ಯಗಳನ್ನು ಗುರ್ತಿಸು ಪುಟ್ಟ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಿರುತ್ತೇನೆ.

Please cite this article as: ರುಕ್ಮಿಣಿ, ಹೆಚ್. ಎಸ್. (2026). ಕಾರ್ನಾಡರ ನಾಟಕಗಳಲ್ಲಿ ಸಂಸ್ಕೃತಿ ಮತ್ತು ಮಾನವೀಯ ಮೌಲ್ಯಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 4(6), 115–120

ಈಗಾಲೆ ನಮಗೆಲ್ಲ ತಿಳಿದಿರುವಂತೆ ಕಾರ್ನಾಡರು ರಚಿಸಿದ 'ಅಂಜುಮಲ್ಲಿಗೆ' ಸಾಮಾಜಿಕ ಕಥಾವಸ್ತುನ್ನಿಟ್ಟಿಕೊಂಡು ರಚನೆಗೊಳಪಟ್ಟದ್ದು. ಋಗ್ವೇದದ ಸಂಹಿತೆಯಲ್ಲಿ ಬರುವ ಯಮ–ಯಮಿಯರ ಸಂವಾದ ಶ್ಲೋಕ ಇದರ ಕಥಾ ಹಂದರವಾಗಿದೆ. ಇಲ್ಲಿ ಬರುವ ಯಮ–ಯಮಿ ಸೋದರತ್ವದ ಸಂಬಂಧ ಹೊಂದಿರುವವರು. ಯಮಿ ಅಕ್ಕನಾದರೆ ಯಮ ತಮ್ಮನಾಗಿದ್ದಾನೆ. ಆದರೆ ಅಕ್ಕ ಯಮಿ ತನ್ನ ಸೋದರನಾದ ಯಮನಲ್ಲಿ ಲೈಂಗಿಕ ಆಪೇಕ್ಷೆಯನ್ನು ಅಭಿವ್ಯಕ್ತಿಸಿದಾಗ ಯಮ ತಿರಸ್ಕರಿಸುತ್ತಾನೆ. ಇದರಿಂದ ಕುಪಿತಳಾದ ಯಮಿ ಅವನನ್ನು ಆಕ್ಷೇಪಿಸುತ್ತಾಳೆ. ಇದರಿಂದ ಅಂದಿನ ಆ ಕುಲ ಗಂಡು–ಹೆಣ್ಣಿನ ಲೈಂಗಿಕ ಸಂಬಂದಕ್ಕೆ ಸಂಬಂಧಿಸಿದಂತೆ ಕಟ್ಟುಪಾಡನ್ನು ಕಟ್ಟುನಿಟ್ಟಾಗಿ ರೂಪಿಸುತ್ತದೆ. ಯಮ–ಯಮಿಯರ ಸಾಮಾಜಿಕ ಕಥಾವಸ್ತುವಿನ ತಿರುಳನ್ನಾಧರಿಸಿ ಕಾರ್ನಾಡರು ರಚಿಸಿದ ನಾಟಕವೇ ಅಂಜುಮಲ್ಲಿಗೆ. ಇಲ್ಲಿಯ ಅಕ್ಕ ಯಮಿನಿ ತಮ್ಮನಾದ ಸತೀಶನ್ನು ಯೌವನಾವಸ್ಥೆಯಲ್ಲಿದ್ದಾಗ ಆಕಸ್ಮಿಕವಾಗಿ ಕೂಡುತ್ತಾಳೆ. ಅದು ಹಲವಾರು ವರ್ಷಗಳ ಕಾಲ ಗೌಪ್ಯವಾಗಿ ನಡೆದರೂ ದರಂತವೆಂಬಂತೆ ಯಾಮಿನಿ ಗರ್ಬಿಣಿಯಾಗುವಲ್ಲಿಗೆ ಸತೀಶ ಎಚ್ಚೆತ್ತುಕ್ಕೊಳ್ಳುವುದ ರೊಂದಿಗೆ ಕೊನೆಯಾಗುತ್ತದೆ. ಮತ್ತು ಸತೀಶ ಇದರಿಂದ ಮುಕ್ತನಾಗಿ ಇಂಗ್ಲೆಂಡಿಗೆ ವಿದ್ಯಾಬ್ಯಾಸಕ್ಕಾಗಿ ಹೋಗಿ ಸುಲಭವಾಗಿ ಬುಹುಬೇಗನೆ ಹೊಸಾ ಮನುಷ್ಯನಾಗುತ್ತಾನೆ. ಅದರೆ ಯಾಮಿನಿ ಸತೀಶನ ದೈಹಿಕ ಸುಖದ ಹಂಬಲತೆಯಿಂದ ಹೊರಬರಲಾರದೆ ಇಂಗ್ಲೆಂಡಿಗೆ ಬಂದು ಅವನೊಟ್ಟಿಗೆ ಸೇರಲು ಬಯಸಿ ಸೋತು ಅಂತಿಮವಾಗಿ ಆತ್ಮಹತ್ಯೆಗೆ ಶರಣಾಗುತ್ತಾಳೆ. ಕಾರ್ನಾಡರು ಈ ನಾಟಕದಲ್ಲಿ ಭಾರತೀಯ ಸಂಸ್ಕೃತಿಯ ಹೆಣ್ಣೊಬ್ಬಳು ತೊಳಲಾಟ ಮತ್ತು ಸೋದರ್ವದ ನಿಷಿದ್ಧ ಅನೈತಿಕ ಸಂಬಂಧದಿಂದ ಉಂಟಾಗಬಹುದಾದ ಅನಾವುತಗಳನ್ನು ತುಂಬ ಸೂಕ್ಷ್ಮವಾಗಿ ಮತ್ತು ಪರಿಣಾಮಕಾರಿಯಾಗಿ ಕಟ್ಟಿಕೊಡುತ್ತಾರೆ. ಅಲ್ಲದೆ ವರ್ಣ ಮತ್ತು ವರ್ಗ ಸಂಘರ್ಷದ ಚಿತ್ರಣವನ್ನು ಎಳೆಎಳೆಯಾಗಿ ಬಿಚ್ಚಿಡುತ್ತಾ ಸಾಗುತ್ತಾರೆ. ಈ ಕಥೆ ಸಾಗುವಿಕೆಗೆ ಕಾರ್ನಾಡರು ಬಳಸಿಕೊಳ್ಳುವ ರಂಗಭೂಮಿ ಭಾರತೀಯ ಸಂಸ್ಕೃತಿಯ ವಾತಾವರಣದಲ್ಲಲ್ಲ. ಬದಲಿಗೆ ಲೈಂಗಿಕತೆಗೆ ಮುಕ್ತವಾತಾವರಣವಿರುವ ಇಂಗ್ಲೆಂಡಿನಲ್ಲಿ. ಈ ಕಥೆಯ ಪ್ರಮುಖ ಪಾತ್ರ ಯಾಮಿನಿಯ ಮಾನಸಿಕ ತೊಳಲಾಟ ಪರಂಪರೆ ಮತ್ತು ಸಂಸ್ಕೃತಗೆ ವ್ಯತಿರಿಕ್ತವಾಗಿ ನಿಲ್ಲತ್ತದೆ.

ಇಲ್ಲಿ ಕಾರ್ನಾಡರು ಲೈಂಗಿಕ ಸುಖವೆನ್ನುವುದ ಕೇವಲ ದೇಹಕ್ಕೆ ಮಾತ್ರ ಸಂಬಂದಿಸಿದ್ದಲ್ಲ. ಅದು ಮಾನಸಿಕ ಸ್ಥಿತಿಗೂ ಅನ್ವಹಿಸುವಂತದ್ದು ಎಂಬುದನ್ನು ಯಾಮಿನಿ ಪಾತ್ರ ಮುಖೇನ ತೋರುತ್ತಾರೆ. ಹಾಗೊಂದು ವೇಳೆ ದೈಹಿಕ ತೃಪ್ತಿ ದೇಹ ಸುಖದಿಂದಲೇ ಆಗುವಂತದ್ದು ಎನ್ನುವಂತಿದದ್ದರೆ ಯಾಮಿನಿ ಡೇವಿಸ್‌ನಿಂದ ದೈಹಿಕ ಸುಖ ಪಡೆದು ಮಾನಸಿಕ ರೋಗಿಯಾಗದೆ ಆರೋಗ್ಯದಿಂದಿರುತ್ತಿದ್ದಳು. ಆದರೆ ಯಾಮಿನಿ ಬಯಸಿದ್ದು ಸತೀಶನ ದೈಹಿಕ ಮತ್ತು ಮಾನಸಿಕ ಪ್ರೇಮವನ್ನ. ಲೇಖಕರು ಈ ನಾಟಕದಲ್ಲಿ ಮನಶಾಸ್ತ್ರಜ್ಞರಂತೆ ಕಾಣುತ್ತಾರೆ. ಇದು ನಾಟಕದ ನಾಟಕೀಯತೆಗೆ ಸಾಕ್ಷಿಯಗಿದೆ. ಅಲ್ಲದೆ ಲೈಂಗಿಕ ಮುಕ್ತತೆ ಪುರುಷರಿಗ್ಗಿದ್ದಷ್ಟು ಸ್ತ್ರೀಯರಿಗಿಲ್ಲವೆಂಬುದನ್ನು ಸಮರ್ಥಿಸುತ್ತಾರೆ.

ಕಾರ್ನಾಡರ ಸೃಜಿಸಿದ ಜೂಲಿಯನ್ ಪಾತ್ರ ಮನವೀಯತೆಯ ಮೌಲ್ಯಗಳಿಗೆ ಪ್ರತೀಕವಾಗಿ ನಿಲ್ಲುವಂತದ್ದು. ಒಡಹುಟ್ಟಿದ ತಮ್ಮನಾದ ಸತೀಶ ಅಕ್ಕನ ಹುಚ್ಚುತನಕ್ಕೆ ಅಸಮಧಾನ ವ್ಯಕ್ತಪಡಿಸಿದಾಗ ಜೂಲಿಯನ್ ಅವನ ಅಭಿಪ್ರಾಯವನ್ನು ಒಪ್ಪುವುದಿಲ್ಲ. ಬದಲಿಗೆ ಅವಳ ಪರಿಸ್ಥಿತಿಗೆ ಸಮರ್ಥನೆಯನ್ನು ಕೊಡುತ್ತಾಳೆ. ಅಲ್ಲದೆ ಇಡೀ ನಾಟಕದಲ್ಲಿ ಯಾಮಿನಿಯನ್ನು ಪ್ರೀತಿ ಮತ್ತು ಗೌರವಾಧಾರಗಳಿಂದ ಕಾಣುವುದು ನಿಸ್ವಾಥಿಯಾದ ಜೋಲಿಯನ್ ಮಾತ್ರ. 'ಹೌದು ಅವಳೂ ನಿನ್ನನ್ನು ಪ್ರೀತಿಸಿದಳು ಅದರಲ್ಲಿ

ತಪ್ಪೇನು?" ಎನ್ನುವಲ್ಲಿ ಅವಳ ಮಾತೃತ್ವ ಹೃದಯ ಸ್ಪಷ್ಟವಾಗುತ್ತದೆ. ಅಲ್ಲದೆ ಸತೀಶನ ಅನೈತಿಕ ಸಂಬಂಧ ತಿಳಿದಾಗ ಆತ್ಮಹತ್ಯೆಗೆ ಪ್ರಯತ್ನಿಸಿದರೂ ಅಂತಿಮವಾಗಿ ಅವನನ್ನು ಕ್ಷಮಿಸಿ ಸ್ವೀಕರಿಸುವ ಕ್ಷೆಮಯಾಧರಿತ್ರಿಯಾಗುತ್ತಾಳೆ.

ಸುಮಾರು 300ಕ್ಕೂ ಹೆಚ್ಚು ಪದ್ಯಗಳನ್ನೊಳಗೊಂಡ ಜನ್ನನ ಯಶೋಧರ ಚರಿತೆ "ಜೀವದಯೆ ಜೈನಧರ್ಮಂ" ಎಂಬ ಆಶಯದೊಂದಿಗೆ ಧರ್ಮ ಪ್ರತಿಪಾದನೆಯನ್ನು ಸಾಧಿಸುವ ಧಾರ್ಮಿಕ ಕೃತಿ. ಈ ಧಾರ್ಮಿಕ ಕೃತಿಯಲ್ಲಿನ ಪೌರಾಣಿಕ ಕಥಾವಸ್ತುವನ್ನು ಕಾರ್ನಾಡರು ತಮ್ಮ ಭಿನ್ನ ವೈಚಾರಿಕ ಮಾನವೀಯ ನೆಲೆಗಟ್ಟಿನಲ್ಲಿ ಸ್ವಲ್ಪ ಬದಲಾವಣೆಯೊಟ್ಟಿಗೆ ತಂದಿದ್ದಾರೆ. ಅದೇ "ಹಿಟ್ಟಿನ ಹುಂಜ" ಎಂಬ ಅತ್ಯದ್ಭುತವಾದ ಕೃತಿ. 'ಮನುಷ್ಯ ನಂಬಿದ ಮೌಲ್ಯ ಮತ್ತು ಪೌವೃತ್ತಿಗಳ ನಡುವಿನ ಮೌನ ಹೋರಾಟವೇ ಈ ನಾಟಕದ ವಸ್ತು'.

'ಹಿಟ್ಟಿನ ಹುಂಜ' ಮಾನವೀಯ ಮೌಲ್ಯಗಳನ್ನು ಪ್ರತಿಯೊಂದು ಹಂತದಲ್ಲೂ ಪ್ರತಿಯೊಂದು ಪಾತ್ರ ಸನ್ನಿವೇಶದಲ್ಲೂ ಪ್ರತಿನಿದಿಸುತ್ತಾ ಸಾಗುತ್ತದೆ. ಮೂಲ ಕಥೆಯನ್ನು ಸ್ವಲ್ಪ ಬದಲಾವಣೆಗೊಳಪಡಿಸಿಕೊಂಡ ಕಾರ್ನಾಡರ ಹೊಸ ಸಾಮಾಜಿಕ ಸಮಾನತೆಯ ಅಂಶವನ್ನು ರಾಣಿಯ ಪಾತ್ರ ಮುಖೇನ ತರುತ್ತಾರೆ. ಪುರುಷ ಸ್ತ್ರೀ ನೈತಿಕವಾಗಿ ಆಗಲಿ ಅನೈತಿಕವಾಗಲೇ ಆಗಲಿ ಸಂಬಂಧ ಹೊಂದುವುದು ಅದೊಂದು ನೈಸರ್ಗಿಕ ಪ್ರಕ್ರಿಯೆ. ಪುರುಷತನದ ಲೈಂಗಿಕ ಆಪೇಕ್ಷೆಯನ್ನು ರಸಿಕತನವೆಂದು ಸ್ತ್ರೀಯರ ಲೈಂಗಿಕ ಆಪೇಕ್ಷೆಯನ್ನು ವ್ಯಭಿಚಾರವೆಂದು ಕರೆಯುವುದು ಸರಿಯಾದ ಕ್ರಮವಲ್ಲವೆಂಬುದನ್ನು ಸೂಚ್ಯವಾಗಿ ತಿಳಿಸಿಕೊಡುತ್ತದೆ. ಕಥೆ ಆರಂಭವಾಗುವುದು ಮುರುಕಲು ಜಿನಬಸಿದಿಯಲ್ಲಿ. ಅದೂ ಬೆತ್ತಲಾಗಿರುವ ಜಿನನ ಪ್ರತಿಮೆಯ ಮುಂದೆ. ಇದು ಬದುಕಿನ ಬೆತ್ತಲೆಯ ಸಾಂಕೇತಿಕತೆಯನ್ನು ತೋರುತ್ತದೆ.

ಕಾರ್ನಾಡರ ಇಲ್ಲಿಯ ಅಮೃತಮತಿ ರಾಣಿಯಾದರೆ, ಚಂದ್ರಮತಿ ರಾಜಮಾತೆಯಾಗಿದ್ದಾಳೆ. ಅಲ್ಲದೆ ಮೂಲದ ಅಮೃತಮತಿಗೆ ಮಗನಿದ್ದರೆ ಇಲ್ಲಿಯ ಅಮೃತಮತಿಯು ತಾಯ್ತನದ ತುಡಿತ–ಮಿಡಿತವನ್ನು ಹೊಂದಿರುವ ಸಾಮಾನ್ಯ ಹೆಣ್ಣಿನ ಮನಸ್ಥಿತಿಯನ್ನು ಹೊಂದಿದ್ದಾಳೆ. ಕಾರ್ನಾಡರು ಇಂತಹ ಹಲವಾರು ಬದಲಾವಣೆಯ ಮೂಲಕ ನಾಟಕದಲ್ಲಿ ಮಾನವೀಯ ಮೌಲ್ಯವನ್ನು ಮೆರೆಯುತ್ತಾರೆ.

ಈ ನಾಟಕದಲ್ಲಿ ಶಾಕ್ತಪಂಥ ಮತ್ತು ಜೈನಧರ್ಮ–ಇವೆರಡರ ನಡುವಿನ ಸಾಂಸ್ಕೃತಿಕ ಸಂಘರ್ಷವನ್ನು ಕಾಣುತ್ತೇವೆ. ಅಹಿಂಸೆಯ ಪ್ರತಿನಿಧಿಯಾಗಿ ರಾಣಿ, ಹಿಂಸೆಯ ಪ್ರತಿನಿಧಿಯಾಗಿ ರಾಜ ಇವರಿಬ್ಬರೂ ತಮ್ಮ ಧಾರ್ಮಿಕ ಅಸ್ತಿತ್ವವನ್ನು ಉಳಿಸಿಕೊಳ್ಳು ಹೆಣಗುತ್ತಾರೆ. ಇವರೀರ್ವರ ಈ ಸಂಘರ್ಷ ಹಲವಾರು ಘಟನಾವಳಿಗಳ ನಂತರ ಅಂತಿಮವಾಗಿ ಹಿಟ್ಟಿನ ಹುಂಜಕ್ಕೆ ಜೀವ ಬಂದು, ರಾಣಿ ಅದಕ್ಕೆ ಅಕ್ಕಿಕಾಳನ್ನು ಹಾಕುವಲ್ಲಿಗೆ ಮುಕ್ತಾಯವಾಗುತ್ತದೆ. ಇಲ್ಲಿಯ ರಾಣೀ ಅಹಿಂಸೆವಾದಿಯಾದರೂ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ದೈಹಿಕ ಮತ್ತು ಮಾನಸಿಕ ಹಿಂಸೆಯ ಪ್ರತಿನಿಧಿಯಾಗಿದ್ದಾಳೆ. ರಾಜ ರಾಣಿಯಿಂದ ಪ್ರಭಾವಿತನಾಗಿ ಜೈನಧರ್ಮವನ್ನು ಸ್ವೀಕರಿಸಿದರೂ ತನ್ನ ಮೂಲತ್ವವನ್ನು ಬಿಟ್ಟುಕೊಡಲಾರದೆ ಒದ್ದಾಡುತ್ತಾನೆ. ಈ ಕಾರಣದಿಂದಲೇ ಅವರೀರ್ವರ ಅನೈತಿಕತೆ ಗೊತ್ತಾದಾಗ ಕೊಲ್ಲುವ ಆಲೋಚನೆ ಮಾಡುವುದು.

ಇಲ್ಲಿಯ ಮಾವುತ ಯಜಮಾನ ಸಂಸ್ಕೃತಿಯನ್ನು ಪ್ರಶ್ನಿಸುವ ದಿಟ್ಟನಾಗಿ ಜೀವದೆಳೆದಿದ್ದಾನೆ.

ಏಯ್! ಸ್ವಲ್ಪ ನಾಲಿಗಿ ಸಂಬಾಳಿಸಿ ಮಾತನಾಡಿರಿ. ಯಾಕ್ಕ? ಕಲತೀರಂತ

ಬರೇ ಬೈಗುನ–ಟ– ಕಲತೀರೇನು' ಯಾವಾಗಿನೀಮದ ನೋಡತೀನು

ಅದ–ನಡದೈತಿ. ಈಗ ಒಳ್ಳೇ ಮಾತೀಲೇ ಆ ಕೋಳಿ ಒಯ್ಯರಿ ಇಲ್ಲಿಂದ,,,

ಎನ್ನುವಲ್ಲಿ ರಾಜನನ್ನು ಪ್ರಶ್ನಿಸುವ ಮಾನವೀಯ ನುಡಿಗಳನ್ನಾಡುವ ಸಹಜ ಮಾನವನಾಗಿ ಕಾಣಿಸಿಗುತ್ತಾನೆ.

ಮೂಲದ ಅಮೃತಮತಿ 'ವಿಧಿವಿಳಸನ'ದಿಂದ ಅಷ್ಟವಂಕನಲ್ಲಿ ಅನೈತಿಕವಾಗಿ ಬೆರೆತರೆ ಕಾರ್ನಾಡರ ಅಮೃತಮತಿ ಮಾನವನ ಸಹಜ ಪ್ರೌವೃತ್ತಿಯಿಂದ ಅಷ್ಟವಂಕನಲ್ಲಿ ಬೆರೆಯುತ್ತಾಳೆ. ಮೂಲದಲ್ಲಿ ವ್ಯಭಿಚಾರಿಯಾಗಿ, ಕಳಂಕಿತೆಯಾಗಿ ಚಿತ್ರಿತವಾಗಿರುವ ಅಮೃತಮತಿ ಇಲಿ ವ್ಯಭಿಚಾರಿಯಲ್ಲ. 'ಜೈನರಾಗಿ ನೀವು ಹಿಂಸೆಗೆ ಒಪ್ಪಿದಿರಿ. ಹೆಂಡತಿಯಾಗಿ ನಾನು ಯಾಕೆ ವ್ಯಭಿಚಾರ ಮಾಡಬಾರದು'? ಎಂದೇಳುತ್ತಾ ತನ್ನ ಅನೈತಿಕ ಸಂಬಂಧವನ್ನು ಸಮರ್ಥಿಸಿಕೊಳ್ಳುತ್ತಾಳೆ. ಮಾನವ ಸಹಜ ಪ್ರೌವೃತ್ತಿಗೆ ಪೂರಕವಾಗಿ ಅಮೃತಮತಿಯ ಪಾತ್ರ ಚಿತ್ರಿತವಾಗಿದೆ. ಇಲ್ಲಿನ ಅಮೃತಮತಿ ದಾಂಪತ್ಯದ ಸುಖದಿಂದ ವಂಚಿತಳಾಗಿ ಏಕಾಂಗಿ ಜೀವನ ನಡೆಸುತ್ತಾ ಮಾನಸಿಕ ಹಿಂಸೆಗೆ ಒಳಗಾಗುವ ಸಹಜ ಲೈಂಗಿಕ ತೃಪ್ತಿಯನ್ನು ಬಯಸುವ ಹೆಣ್ಣಾಗಿ ಕಾಣಿಸಿಗುತ್ತಾಳೆ. ಅಲ್ಲದೆ ಸಂಪ್ರದಾಯಬದ್ಧ ಪುರುಷ ನಿರ್ಮಿತ ಸಮಾಜದಲ್ಲಿ ಯಾವ ತಪ್ಪನ್ನು ಮಾಡದೆ ಶೋಷಣೆಗೊಳಗಾಗುತ್ತಿರುವ ಎಷ್ಟೂ ಹೆಣ್ಣು ಮಕ್ಕಳ ಪ್ರತಿನಿಧಿಯಂತಿದ್ದಾಳೆ. "ತನ್ನ ಆಲಾಪದಲ್ಲಿ ತನ್ನನ್ನು ಅದುಮಿ ಹಿಡಿದು ಹಾಕಿತು. ನನ್ನ ಕೋಮಾರ್ಯ ಹರಿಯಿತು' ಎನ್ನುವಲ್ಲಿ ಅವಳ ವ್ಯಭಿಚಾರದ ಪರಿಕಲ್ಪನೆ ಸ್ಪಷ್ಟವಾಗುತ್ತದೆ. ವ್ಯಭಿಚಾರವೆನ್ನುವುದು ದೈಹಿಕವಾಗಲ್ಲ. ಅದು ಮಾನಸಿಕವಾಗಿ ಎಂದೋ ನಡೆಯಿತೆಂಬುದನ್ನು ಸೂಕ್ಷ್ಮವಾಗಿ ಹೇಳುವ ದಿಟ್ಟೆಯಾಗಿದ್ದಾಳೇ.

ಇಲ್ಲಿಯ ರಾಜ ಹೆಂಡತಿಯ ಈ ಕೆಟ್ಟ ವ್ಯಕ್ತಿತ್ವಕ್ಕೆ ಅಸೂಯೆ ಪಡುವ, ತಿರಸ್ಕರಿಸುವ ವ್ಯಕ್ತಿತ್ವದ ವ್ಯಕ್ತಿಯಾಗುವುದಕ್ಕಿಂತಲೂ ಹೆಚ್ಚೆಂಬಂತೆ ಆಕೆಯನ್ನು ಆ ಸ್ಥಿತಿಗೆ ಕಾರಣವನ್ನು ಆಲೋಚಿಸುವ ಆಲೋಚನಾಪರನಾಗಿದ್ದಾನೆ. ತನ್ನ ಅರ್ಧಾಂಗಿಯ ಮನಸ್ಸನ್ನು ಅರ್ಥಮಾಡಿಕೊಳ್ಳುವ ಪತಿಯಾಗಿ ಕಾಣಿಸಿಗುತ್ತಾನೆ. ಅಲ್ಲದೆ ಪತ್ನಿಯ ತಪ್ಪನ್ನು ತಿದ್ದುವ ಮಾನವೀಯ ವ್ಯಕ್ತಿತ್ವವನ್ನು ಮೆರೆದಿದ್ದಾನೆ.

ನಿನ್ನ ಮನಸ ಬದಲಿಸಲಿಕ್ಕೆ ನಾನು ಇನ್ನೇನು ಮಾಡಬೇಕು

ಹೇಳು? ನಿನ್ನ ಕಳ್ಳ ಬಸುರಿನ ಸಲುವಾಗಿ ಬತ್ತಲೆ ಬೈರಾಗಿಯಾದೆ

ನಿನ್ನ ವ್ಯಭಿಚಾರಕ್ಕಾಗಿ ಷಂಡನಾದೆ,,,,,,, ಏನು ಮಾಡಲಿ,,,,,,

ಎನ್ನುವಲ್ಲಿ ಅವನ ಮಾನವೀಯ ಸಂಬಂಧದದ ಬಗೆಗಿನ ಕಾಳಜಿ ಅಭಿವ್ಯಕ್ತವಾಗುತ್ತದೆ. ತನಗೆ ಸಿಗದ ಸುಖ–ಸಂತೋಷಗಳನ್ನು ಪಡೆಯುವ ಸಲುವಾಗಿ ಮಾವುತನೊಟ್ಟಿಗೆ ಸೇರುತ್ತಾಳೆ. ರಾಣಿಯೇ ಆದರೂ ಅವಳೂ ಹೆಣ್ಣಲ್ಲವೇ? ತಾಯ್ತನದ ತುಡಿತ ಮಿಡಿತ ಅವಳಲ್ಲಿಯೂ ಇರುವುದಿಲ್ಲವೆ? ಈ ಮುಂತಾದ ಪ್ರಸ್ನೆಗಳು ಓದುಗರ ಮನಸಿನಲ್ಲಿ ಮೂಡುವಂತೆ ಕಥೆ ಸಾಗುತ್ತದೆ.

ಕಾರ್ನಾಡರ ಮತ್ತೊಂದು ಅತ್ಯಬ್ಭುತ ಪೌರಣಿಕ ಕಥಾವಸ್ತುವನ್ನೊಳಗೊಂಡ ನಾಟಕ 'ಅಗ್ನಿ ಮತ್ತು ಮಳೆ'– ಇದು ಭಾರತೀಯ ಸಂಸ್ಕೃತಿಯ ವಿಭಿನ್ನತೆಯನ್ನು ನಾಟಕದುದ್ದಕ್ಕೂ ನೀಡುತ್ತಾ ಸಾಗುತ್ತದೆ. ಮಹಾಭಾರತದಲ್ಲಿ ಬರುವ ಯವಕ್ರೀತನ ಪುಟ್ಟ ಕಥೆ ಈ ನಾಟಕದ ಕಥಾವಸ್ತು. ಪೌರೋಹಿತ್ಯದ ಶ್ರೇಷ್ಟತೆ, ಯಜ್ಞ ಯಾಗಾದಿಗಳಿಂದಾಗುವ ಫಲಾನುಫಲ ಈ ಮುಂತಾದ ಸಂಸ್ಕೃತಿಕ ಅಂಶಗಳೊಟ್ಟಿಗೆ ಅಧಿಕಾರದ ಮೋಹ, ಪೌರೋಹಿತ್ಯದಲ್ಲಿನ ರಾಜಕೀಯ ಕುಂತಂತ್ರ ನಾಟಕದ ಪ್ರಾತಗಳ ಮುಖೇನ ಅಭಿವ್ಯಕ್ತವಾಗುತ್ತದೆ. ನಾಟಕ ಶ್ರೇಷ್ಟ ಮತ್ತು ಕನಿಷ್ಟವೆಂಬ ನೆಲೆಗಟ್ಟಿನಲ್ಲಿ ಮೇಲು–ಕೀಳು ಎಂಬ ಹಿನ್ನೆಲೆಯನ್ನು ವಿಶ್ಲೇಷಿಸುತ್ತದೆ. ಅಂತಿಮವಾಗಿ ಕನಿಷ್ಟ ಸಂಸ್ಕೃತಿಯಲ್ಲಿನ ಮಾನವೀಯ ಮೌಲ್ಯಗಳೇ ಬದುಕನ್ನು ಸುಖೀಗೊಳಿಸುವ ಪರಿಯನ್ನು ಸ್ಪಷ್ಟಪಡಿಸುತ್ತದೆ. ನಾಟಕದಲ್ಲಿ ರೈಭ್ಯಋಷಿ, ಅರವಸು, ಪರಾವಸು, ವಿಶಾಖ, ಯವಕ್ರೀತ ವೈದಿಕ ಸಂಪ್ರದಾಯದ ಪ್ರತಿನಿಧಿಗಳಾಗಿ

ತಮ್ಮ ಸ್ವಾರ್ಥಕ್ಕಾಗಿ ಏನನ್ನಾದರೂ ಮಾಡುವ, ಯಾರನ್ನಾದರೂ ನಾಶಮಾಡುವ ಸ್ವಾರ್ಥಿಗಳಾಗಿ ವೈಧಿಕ ಸಂಸ್ಕೃತಿಯ ಪ್ರತಿಂಬಗಳಾದರೆ ಅಗ್ನಿಯ ಪ್ರತೀಕವಾಗಿದ್ದರೆ.

ಮಾನವೀಯ ಪ್ರತಿಬಿಂಬವಾಗಿ, ದ್ವೇಷಿಸುವವರನ್ನು ಪ್ರೀತಿಸುವ, ಅವರಿಗಾಗಿ ತನ್ನನೇ ಅರ್ಪಿಸಿಕೊಳ್ಳುವ ಹಾಗೆಯೇ ಅವರ ಉದ್ಧಾರಕ್ಕಾಗಿ ತನ್ನ ಪ್ರಾಣವನ್ನೇ ಬಲಿಕೊಡುವ ನಿಷಾಧಕುಲದ ನಿತ್ತಿಲೆ ಮತ್ತೊಂದು ಸಂಸ್ಕೃತಿಯ ಪ್ರತಿಬಿಂಬವಾಗಿದ್ದಾಳೆ. ವೈದಿಕ ಸಂಪ್ರದಾಯದ ವ್ರತಾಚರಣೆಯ ಗೊಂದಲತೆ, ವಿರಹಿಗಳ ಮನೂವಿಕಾತರೆ, ಅಧಿಕಾರದ ದಾಹ, ಅನೈತಿ ಸಂಬಂಧಗಳ ಚಿತ್ರಣ, ಒಂದು ಮಳೆ ಹನಿಗಾಗಿ ಆತೊರೆಯುವ ಸಮಾಜಿಕ ಚಿತ್ರಣ,,, ಇವು ನಾಟಕದಲ್ಲಿ ಒಟ್ಟಾರೆಯಾಗಿ ಒಡಮೂಡುತ್ತೆ. ಈ ನಾಟಕದ ಕಥೆಯು ರಾಜ್ಯದ ಜನರನ್ನು ಅನಾವೃಷ್ಟಿಯಿಂದ ಮುಕ್ತವಾಗಿಸುವ ಸಲುವಾಗಿ ಆರಂಭಿಸುವ ಯಜ್ಞದಿಂದ ಶುರುವಾಗಿ ನಿತ್ತಿಲೆಯ ಸಾವಿನೊಟ್ಟಿಗೆ ಮಳೆತರುವಲ್ಲಿ ಮುಕ್ತಾಯವಾಗುತ್ತದೆ. ಇದರಿಂದ ಕುಪಿತರಾದ ಗಂಡ ಮತ್ತು ಮಾವ ನಿತ್ತಿಲೆಯನ್ನು ಕೊಲೆಗೈಯುತ್ತಾರೆ. ಇದರಿಂದ ಆಘಾತಗೊಂಡ ಅರವಸು ಅವಳನ್ನು ಬದುಕಿಸಿಕೊಡೆಂದು ಇಂದ್ರನಲ್ಲಿ ಮೊರೆಯಿಟ್ಟಾಗ ಇಂದ್ರ ಕಾಲದ ವ್ಯತಿರಿಕತ್ತೆಯನ್ನು ತಿಳಿಸುತ್ತಾನೆ. ನಿತ್ತಿಲೆಯ ಜೊತೆ ತಂದೆ ಮತ್ತು ಅಣ್ಣನನ್ನು ಜೀವಂತಗೊಳಿಸಬೇಕಾದ ಅನಿವಾರ್ಯತೆಯನ್ನು ತಿಳಿಸುತ್ತಾನೆ. ಅರವಸು ಸ್ವತಃ ಪ್ರಾಣತ್ಯಾಗ ಮಾಡಲು ಮುಂದಾದಾಗ ಮಳೆ ಬಂದು ದಗದಗಿಸುತ್ತಾ ಉರಿಯುತ್ತಿದ್ದ ಅಗ್ನಿ ಶಾಂತವಾಗುತ್ತದೆ. ಇತ್ತ ಬರಗಾಲದಿಂದ ಬಳಲಿದ್ದ ಜನ ಮಳೆಯಿಂದ ಹರ್ಷೋಲ್ಲಾಸರಾಗಿ ಕುಣಿದು ಕುಪ್ಪಳಿಸುತ್ತಾರೆ. ಕಾರ್ನಾಡರು ಈ ನಾಟಕದಲ್ಲಿ ಲೌಕಿಕ ಬದುಕಿನ ವರ್ಗ ಮತ್ತು ವರ್ಣ ಸಂಘರ್ಷದ ಅಹಂಮಿಕೆಯನ್ನು ವಿಶ್ಲೇಷಿಸುವುದರ ಜೊತೆಜೊತೆಗೆ ನಿತ್ತಿಲೆಯಮತಹ ಭಾವಜೀವಿ, ಮಾನವೀಯ ಸಂಬಂಧಗಳಿಗೆ ಬೆಲೆಕೊಡುವ ಪ್ರೀತಿಯ ಸಾಕಾರಮೂರ್ತಿಯನ್ನು ತರುತ್ತಾರೆ. ಈ ಹಿಂದೆ ಹೇಳಿದ ಹಾಗೆ ಕಾರ್ನಾಡರ ಮಹಾ ಸಂಪ್ರದಾಯ ಮತ್ತು ಕಿರುಸಂಪ್ರದಾಯವನ್ನು ಮುಖಾಮುಖಿಗೊಳಿಸುತ್ತಾ ಕಿರುಸಂಸ್ಕೃತಿಯ ಮಾನವೀಯ ಮೌಲುಗಳನ್ನು ಎತ್ತಿಹಿಡಿಯುತ್ತಾರೆ.

ಇಲ್ಲಿಯ ನಿತ್ತಿಲೆ ನಿಷಾದ ಕುಲದವಳಾದರೂ ಮಾನವೀಯ ಮೌಲ್ಯಗಳಿಗೆ ಪ್ರತೀಕವಾಗಿ ನಿಲ್ಲುತ್ತಾಳೆ. ವೈಧಿಕ ಸಂಪ್ರದಾಯದ ಅರವಸುವನ್ನು ಪ್ರಾಮಾಣಿಕವಾಗಿ ಪ್ರೀತಿಸಿದರೂ ಪರಿಸ್ಥಿತಿಯ ಕೈಗೊಂಬೆಯಾಗಿ ಬೇರೊಬ್ಬನ ಮಡದಿಯಾಗುತ್ತಾಳೆ. ಮುಂದೆ ಪರಾವಸುವಿನಿಂದ ಅರವಸು ಹಿಂಸೆಗೊಳಗಾದಾಗ ತನ್ನ ಸಂಸಾರವನ್ನು ತ್ಯಜಿಸಿ ಅವನ ಸುಶ್ರೂಷೆ ಮಾಡುವ ಮೂಲಕ ನೈತಿಕತೆಯನ್ನು ತೋರುತ್ತಾಳೆ. ಅಲ್ಲದೆ ಗಂಡನನ್ನು ತ್ಯಜಿಸಿದರೂ ತನ್ನ ಪ್ರೇಮಿ ಅರವಸುವಿನೊಂದಿಗೆ ಸಂಬಂಧ ಹೊಂದದೆ ದೂರ ಸರಿಯುವುದರೊಟ್ಟಿಗೆ ನಾವಿಬ್ಬರೂ ಅಣ್ಣ–ತಂಗಿಯಂತೆ ಬಾಳ್ವೆ ನೆಡೆಸುವ ಆಶಯವನ್ನು ವ್ಯಕ್ತಪಡಿಸುವುದರ ಮೂಲಕ ನೈತಿಕ ಸಂಬಂಧದ ಶ್ರೇಷ್ಟತೆಯ ಪ್ರತಿಬಿಂಬವಾಗುತ್ತಾಳೆ. ತನ್ನ ಸಾವಿನೊಟ್ಟಿಗೆ ಮಳೆಯನ್ನು ತರುವ ಜೀವನ ಪ್ರೀತಿಯ ಸೆಲೆಯಾಗುತ್ತಾಳೆ. ಇದಕ್ಕೆ ತದ್ವಿರುದ್ಧ ವ್ಯಕ್ತಿತ್ವವೆಂಬಂತೆ ಶ್ರೇಷ್ಠ ಸಂಸ್ಕೃತಿಯ ವಿಶಾಕಳ ಪಾತ್ರವನ್ನು ತರುತ್ತಾರೆ. ಇವಳೂ ಕೂಡ ಯುವಕ್ರೀತನನ್ನು ಪ್ರೇಮಿಸಿ ಪರಿಸ್ಥಿತಿಯ ಕೈಗೊಂಬೆಯಾಗಿ ಪರಾವಸುವನ್ನು ಮದುವೆಯಾಗುತ್ತಾಳೆ. ಆದರೆ ವೈದಿಕಸಂಪ್ರದಾಯ ಮತ್ತು ಸಂಸ್ಕೃತಿಗೆ ವಿರುದ್ಧವಾಗಿ ಮತ್ತೆ ತನ್ನ ಪ್ರೇಮಿಯನ್ನು ಕೂಡುತ್ತಾಳೆ. ಜೊತೆಗೆ ತನ್ನ ಸ್ವಾರ್ಥ ಸಾಧನೆಗಾಗಿ ಮಾವನನ್ನೇ ಕೊಲ್ಲಿಸುವಲ್ಲಿ ಸಫಲಳಾಗುತ್ತಾಳೆ. ಎರಡು ವಿಭಿನ್ನ ಪಾತ್ರಗಳ ಮೂಲಕ ಮೇಲ್ವರ್ಗ ಮತ್ತು ಕೆಳವರ್ಗದವರ ಸಂಘರ್ಷ ಮತ್ತು ಅವರ ಗುಣಗಳನ್ನು

ನಾಟಕಕಾರರು ಅಗ್ನಿ ಮತ್ತು ಮಳೆ ಎಂಬ ಪ್ರತಿಮಾರೂಪದಲ್ಲಿ ತರುತ್ತಾರೆ.

ತಮ್ಮ ಸ್ವಾರ್ಥಕ್ಕಾಗಿ ಸ್ವಾರ್ಥಪರರಾದ ಮೇಲ್ವರ್ಗದವು ತಮ್ಮ ಸ್ವಾರ್ಥ ಸಾಧನೆಗಾಗಿ ಏನನಾದರೂ ಮಾಡುವ ಗುಣವುಳ್ಳವರೆಂಬುದನ್ನು ಅಕ್ಷರ ಜ್ಞಾನವಿಲ್ಲದಿದ್ದರೂ ಮಾನವೀಯ ಮೌಲ್ಯಗಳ ಪ್ರತಿನಿಧಿನಿ ಮಾನವೀಯ ಸಂಬಂಧಗಳಿಗೆ ಬೆಲೆಕೊಡುವ ಸಂಕೇತವಾಗಿ ಮಳೆಯನ್ನು ಬಳಸಿದ್ದಾರೆ. ಮಳೆ ಜೀವಾಮೃತ ನೀಡುವ ಗುಣ ಇದಕ್ಕೆ ಸಾಕ್ಷಿಯಾಗಿ ಮೇಲ್ವರ್ಗದ ವಿಶಾಖಳನ್ನು ಕೇಲವರ್ಗದ ನಿತ್ತಿಲೆಯನ್ನು ತರುತ್ತಾರೆ. ಪ್ರೇಮದ ಅನನ್ಯತೆಯನ್ನು ಅಂತರ್‌ಜಾತಿಯ ವಿವಾಹದೊಡನೆ ಸಮರ್ಥಿಸುವ ಪ್ರಯತ್ನ ಮಾಡುತ್ತಾರೆ. ಘಾಡವಾದ ಪ್ರೇಮವನ್ನು ತಂದರೂ ಅವರಿಬ್ಬರೂ ಪರಸ್ಪರ ಪ್ರೀತಿಸಿದಂತೆ ದಂಪತಿಗಳಾಗಲು ಅವಕಾಶ ನಿತ್ತಿಲೆಯ ಮರಣದಿಂದ ತಪ್ಪುತ್ತದೆ. ಇದು ಕಾರ್ನಾಡರ ಸಾಂಪ್ರದಾಯಿಕ ಮನಸ್ಥಿತಿ ಇರಬಹುದು.

ಒಟ್ಟಾರೆಯಾಗಿ ಕಾರ್ನಾಡರ 'ಹಿಟ್ಟಿನ ಹುಂಜ', 'ಅಂಜುಮಲ್ಲಿಗೆ' ಹಾಗೂ 'ಅಗ್ನಿ ಮತ್ತು ಮಳೆ' ನಾಟಕಗಳು ಕೇವಲ ರಂಗ ಪ್ರಯೋಗಗಳಾಗಿ ಉಳಿಯದೆ, ಭಾರತೀಯ ಸಾಂಸ್ಕೃತಿಕ ಚರಿತ್ರೆಯ ವಿಮರ್ಶಾತ್ಮಕ ದಾಖಲೆಗಳಾಗಿ ಗಮನ ಸೆಳೆಯುತ್ತವೆ. ಸಂಪ್ರದಾಯ, ಧರ್ಮ ಮತ್ತು ಆಚರಣೆಗಳ ಹೆಸರಿನಲ್ಲಿ ನಡೆಯುವ ಅಮಾನವೀಯತೆ, ಅಹಂಕಾರ ಹಾಗೂ ಸ್ವಾಮ್ಯ ಸೂಚಕ ಮನೋಭಾವವನ್ನು ಈ ಮೂರೂ ಕೃತಿಗಳು ತೀಕ್ಷಣವಾಗಿ ಪ್ರಶ್ನಿಸುತ್ತವೆ. ಈ ಮೂರು ನಾಟಕಗಳು ಸಂಪ್ರದಾಯ ಮತ್ತು ಆಚರಣೆಗಳಿಗಿಂತ ಮನುಷ್ಯನ ಅಂತರಂಗ ಶುದ್ಧಿ, ಪ್ರೀತಿ ಮತ್ತು ಕರುಣೆಯೇ ನಿಜವಾದ ಸಂಸ್ಕೃತಿ ಹಾಗೂ ಶ್ರೇಷ್ಠ ಮಾನವೀಯ ಮೌಲ್ಯಗಳೆಂದು ಸಾರುತ್ತವೆ. ಬಾಹ್ಯ ಆಡಂಬರಕ್ಕಿಂತ ಅಂತರಂಗದ ಶುದ್ಧಿ, ಅಹಿಂಸೆ ನಿಸ್ವಾರ್ಥ ಪ್ರೀತಿ ಮತ್ತು ಕ್ಷಮೆಯೇ ನಿಜವಾದ ಸಂಸ್ಕೃತಿಯ ತಳಹದಿ ಎಂಬುದನ್ನು ಈ ನಾಟಕಗಳು ಮನಗಾಣಿಸುತ್ತವೆ. ಆಧುನಿಕ ಕಾಲಘಟ್ಟದ ಸಂಕೀರ್ಣ ಬದುಕಿನಲ್ಲಿಯೂ ಮನುಷ್ಯತ್ವವನ್ನು ಉಳಿಸಿಕೊಳ್ಳಲು ಬೇಕಾದ ನೈತಿಕ ಎಚ್ಚರ ಮತ್ತು ಸಾರ್ವಕಾಲಿಕ ಮಾನವೀಯ ಮೌಲ್ಯಗಳನ್ನು ಈ ಕೃತಿಗಳು ಸಮರ್ಥವಾಗಿ ಕಟ್ಟಿಕೊಟ್ಟಿವೆ.

ಪರಾಮರ್ಶನ ಕೃತಿಗಳು

- ಅಮೂರ, ಜಿ.ಎಸ್. *ಗಿರೀಶ್ ಕಾರ್ನಾಡರ ನಾಟಕಗಳು: ಒಂದು ಅಧ್ಯಯನ.*
- ಬಸವರಾಜ ಕಲ್ಗುಡಿ. *ಗಿರೀಶ್ ಕಾರ್ನಾಡರ ನಾಟಕಗಳಲ್ಲಿ ಪುರಾಣ ಮತ್ತು ಚರಿತೆ*
- ಕೀರ್ತಿನಥ ಕುರ್ತಕೋಟಿ. *ಕನ್ನಡ ನಾಟಕ ಪರಂಪರೆ ಮತ್ತು ಪ್ರಯೋಗ*
- ರಾಮಚಂದ್ರನ್, ಸಿ.ಎನ್. (ಸಂ.). *ಗಿರೀಶ್ ಕಾರ್ನಾಡ್ – ವ್ಯಕ್ತಿ ಮತ್ತು ಅಭಿವ್ಯಕ್ತಿ*